# ಶಂಕರ ಮೊಕಾಶಿ ಪುಣೇಕರ ಗಂಗವ್ವ ಗಂಗಾಮಾಯಿ ಕಾದಂಬರಿಯ ಕಥನ ವಿನ್ಯಾಸ

ಡಾ.ಶುಭಾ ಮರವಂತೆ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು ಶಿವಮೊಗ್ಗ.

ಕನ್ನಡದ ಪ್ರತಿಭಾವಂತ ಲೇಖಕರಲ್ಲಿ ಮುಖ್ಯರಾದ ಶಂಕರ್ ಮೊಕಾಶಿ ಪುಣೇಕರ್ ನವ್ಯ ಸಾಹಿತ್ಯದ ವಿಭಿನ್ನ ಧ್ವನಿ. ಧಾರವಾಡದಲ್ಲಿ ಹುಟ್ಟಿ ಬೆಳೆದ ಅವರು ವೃತ್ತಿಯಿಂದ ಶಿಕ್ಷಕರು. ಕನ್ನಡ ಇಂಗ್ಲೀಷ್ ಎರಡರಲ್ಲೂ ಒಟ್ಟು ಮೂವತ್ತೈದಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಅವರ ಎರಡು ಅಪೂರ್ವ ಕಾದಂಬರಿಗಳು ಸಾಹಿತ್ಯ ಲೋಕದ ಎರಡು ನಕ್ಷತ್ರಗಳು. ಋಗ್ವೇದದ ಕೆಲವೇ ಮಂತ್ರ ಹಾಗೂ ಹರಪ್ಪ ಮಹೆಂಜೋದಾರಗಳಲ್ಲಿ ದೊರೆತ ಕೆಲವು ಮುದ್ರಿಕೆಗಳನ್ನು ಬಳಸಿಕೊಂಡು ರಚಿತವಾದ ಅವಧೇಶ್ವರಿ, ಕೇಂದ್ರ ಸಾಹಿತ್ಯ ಪ್ರಶಸ್ತಿ ಪಡೆದ ಗಂಗವ್ವ ಗಂಗಾಮಾಯಿ ಮೂಲಕ ಸಾಹಿತ್ಯ ಲೋಕದಲ್ಲಿ ಮೂಡಿಸಿದ ಛಾಪು ಮರೆಯುವಂತಿಲ್ಲ.

ಗಂಗವ್ವ ಗಂಗಾ ಮಾಯಿ ಪೂಣೇಕರ್ ಅವರ ಮಹತ್ವಾಂಕ್ಷೆಯ ಕಾದಂಬರಿ. ಕಾದಂಬರಿಯ ಮೂಲ ಚಲನೆಗೆ ಕಾರಣವಾಗುವ ಗಂಗವ್ವನ ಪಾತ್ರವೇ ಇಲ್ಲಿ ಮುಖ್ಯ. ಇದರ ಸುತ್ತ ಚೆಲ್ಲಿಕೊಳ್ಳುವ ಮೂರು ತಲೆಮಾರುಗಳ ಕಥೆಗೆ ಮೂಲ ಪ್ರೇರಣೆ ಅವಳ ಸ್ವಾಭಿಮಾನ. ಅವಳೊಂದು ಎಚ್ಚರದ ಪ್ರತೀಕ. ಮೋಸ ಹೋಗುವ ಮೋಸ ಹೋಗಿಸುವ ಈ ಎರಡೂ ಮನುಷ್ಯ ಜಗತ್ತಿನ ಕುತಂತ್ರಗಳ ಬಗೆಗೆ ಸದಾ ಎಚ್ಚರದಲ್ಲಿರಬೇಕಾದ ಜಾಗೃತ ಪ್ರಜ್ಞೆಯನ್ನು ಬಹು ಜತನದಿಂದ ಕಾಯ್ದುಕೊಂಡವಳು. ಕಾದಂಬರಿಯು ಆರಂಭಗೊಳ್ಳುವುದೇ ಒಂದು ಬಗೆಯ ಆತಂಕ, ದ್ವಂದ್ವದಿಂದ. ಸಾಂಪ್ರದಾಯಿಕತೆಯ ವಿರುದ್ಧವೇ ಎದ್ದ ತಲ್ಲಣ, ಬಂಡಾಯ. ಜೀವಿತದ ಪರಮ ಉದ್ದೇಶಗಳಲ್ಲಿ ಒಂದಾದ ಕಾಶಿಯಾತ್ರೆ ಬದುಕಿನ ಪೂರ್ಣತೆಯೆಡೆಗೆ ಸಾಗುತ್ತ ಇಹದ ಸಂಬಂಧಗಳನ್ನು ಕಳಚಿಕೊಳ್ಳುವುದಕ್ಕೆ ಪೂರಕವಾಗಬೇಕಾದ ಸನ್ನಿವೇಶದಲ್ಲಿಯೇ ಮತ್ತೆ ಹಳೆಯ ಬಂಧನಕ್ಕೆ ಬದುಕಿಗೆ ಮರಳುವ ಸಂದಿಗ್ಧತೆಯನ್ನು ಅಲ್ಲಿ ಕಾಣುತ್ತೇವೆ. ಮನಸ್ಸಿನ ಮೂಲೆಯೊಳಗೆದ್ದ ಯೋಚನೆಗಳ ತರಂಗ ಅವಳನ್ನು ಬಡಿದೆಬ್ಬಿಸಿದುದಲ್ಲದೆ, ಯಾರಿಗೂ ಕಾಣದ ಹಾಗೆ ಪವಿತ್ರ ಗಂಗೆಯ ನೀರನ್ನು ಹೊರಗೆ ಚೆಲ್ಲುವ ಗಂಗಮ್ಮನ ನಿಲುವಿನಿಂದಾಗಿಯೇ ಕಾದಂಬರಿ ಪಡೆಯುವ ತಿರುವು ಮುಖ್ಯವಾಗುತ್ತದೆ. ಇಡೀ ಕಾದಂಬರಿಯಲ್ಲಿ ಗಂಗೆ ಒಂದು ಪ್ರತಿಮೆ. ಗಂಗವ್ವ ಗಂಗಾಮಾಯಿಯಾಗಿ ಬದಲಾವಣೆ ಹೊಂದುವಲ್ಲಿಯೇ ಕಾದಂಬರಿ ತನ್ನ ಸಾರ್ಥಕತೆ ಕಂಡುಕೊಳ್ಳುತ್ತದೆ. ಅನೇಕ ನಿಗೂಢತೆಗಳನ್ನು ಒಳಗಿಟ್ಟುಕೊಂಡು ತಣ್ಣನೆ ಹರಿಯುವ ಗಂಗೆಯಲ್ಲಿ ಒಮ್ಮೆಲೆ ಅಲೆಗಳೆದ್ದು ಕಂಪಿಸುವ ಹಾಗೆ ಗಂಗವ್ವನೂ ತಲ್ಲಣಕ್ಕೆ ಒಳಗಾದಳು. ಗಂಗೆ ಜೀವ ವೈವಿಧ್ಯತೆಗಳನ್ನು ಕಾಯುವ ಗುಣಗಳಿಂದ ಗಂಗಾ ಮಾತೆ ಗಂಗವ್ವನಲ್ಲಿ ಆವರಿಸಿಕೊಂಡಿರುವುದು ಕೂಡ ಜೀವದ್ರವ್ಯವಾಗಿಯೇ. ಕಿಟ್ಟಿ ಎಂಬ ತನ್ನ ಕರುಳ ಕುಡಿಗಾಗಿ ಬತ್ತುತ್ತಿದ್ದ ತನ್ನ ಒಡಲಿನ ಜೀವದ್ರವ್ಯವನ್ನು ಗಂಗೆಯ ದರ್ಶನದಿಂದಾಗಿ ಮತ್ತೆ ತುಂಬಿಕೊಳ್ಳುತ್ತಾಳೆ. ಗಂಗೆಯ ನೀರು ಬರೀ ಹೊರಗೆ ಚೆಲ್ಲುವ ಕ್ರಿಯೆ ಮಾತ್ರವಲ್ಲ; ಮತ್ತೆ ಗಂಗಮ್ಮ ಗಂಗೆಯ ಪವಿತ್ರ ನೀರನ್ನು ಜೀವ ಚೈತನ್ಯಕ್ಕೆ ಸುರಿದುಕೊಂಡಳು ಎಂದರೆ ಹೆಚ್ಚು ಸ್ಪಷ್ಟವಾದೀತು. ಬದುಕುವ ಆಸೆಯನ್ನು ಚಿಗುರಿಸಿಕೊಳ್ಳುವ, ಚೇತರಿಸಿಕೊಳ್ಳುವ ಪ್ರಯತ್ನವೆಂಬಂತೆ ಕಂಡು ಬರುತ್ತದೆ. "ಅವನು(ಕಿಟ್ಟಿ) ಮನುಷ್ಯನಾದದ್ದನ್ನು ಕಾಣಬೇಕು. ನಾಲ್ಕು ಜನರು ಅವನನ್ನು ಹೊಗಳುತ್ತಿರುವುದನ್ನು ಕೇಳಬೇಕು. ಅವನ ಮಕ್ಕಳು ಅಜ್ಜಿಯ ಅಂಗೈ ತುತ್ತಿಗಾಗಿ ತನ್ನ ಸುತ್ತು ಸುಳಿದಾಡಬೇಕು. ಅವರಿಗೆ ತಾನು ಕಥೆ ಹೇಳಿ 'ತಾರಮ್ಮಯ್ಯ' ಮಾಡಿಸಬೇಕು.ಅದಕ್ಕಾಗಿ ತಾನು ಸಾಯಲಾರಳು. ಕೊನೆವರೆಗೆ ಸಾಧ್ಯವಿದ್ದ ಮಟ್ಟಿಗೆ ಬದುಕುವಳು!" 'ಮರಣ ಸಂದೇಶ'ದಂತಿದ್ದ ಗಂಗೆಯನ್ನು ಹೊರಚೆಲ್ಲುವುದು ಅವಳಿಗೆ ಅನಿವಾರ್ಯವೆನಿಸಿತು.

ಕಾಶೀಯಾತ್ರೆಯ ಇನ್ನೊಂದು ಅನುಭವ ಗಂಗವ್ವನಿಗೆ ಮಾತ್ರ ಗೊತ್ತು. ಯಾರಿಗೂ ಹೇಳದೇ ಅಕೆಯೊಬ್ಬಳೇ ಅನುಭವಿಸಿದ ಕ್ಷಣವದು. ಗುಡ್ಡದ ನೂರಾರು ಅಡಿ ಎತ್ತರದ ಕಡಿದಾದ ಕಾಲು ದಾರಿಯಲ್ಲಿ ಸಾಗಬೇಕಾದಾಗ ಸಾಮಾನು ಹೊತ್ತ ಬೋಯಿಗಳು ಯಾರೂ ಕೆಳಗೆ ನೋಡದಂತೆ ಎಚ್ಚರಿಕೆ ನೀಡುತ್ತಾರೆ. ಎಷ್ಟೋ ಜನ ಕೆಳಗೆ ನೋಡಿ ಕಣ್ಣು ತಿರುಗಿ ಬಿದ್ದು ಸತ್ತ ಉದಾಹರಣೆಗಳೂ ಇದ್ದುವು. ಆದರೆ ಗಂಗವ್ವ ಜೀವ ನಿಲ್ಲದೆ ಒಮ್ಮೆ ತಿರುಗಿ ನೋಡಿದ್ದಳು. ದೂರ ಕಗ್ಗತ್ತಲಾದ ತೆಗ್ಗಿನಲ್ಲಿ ಗಂಗಾ ಮಾಯಿಯ ಶುಭ್ರ ಪ್ರವಾಹ ಥಳಥಳ ಹೊಳೆಯುತ್ತಾ ಗಂಗವ್ವನನ್ನು ಕರೆದ ಹಾಗಾಯಿತಂತೆ. ಗಕ್ಕನೆ ಗಂಗವ್ವ ಕಣ್ಣು ಹೊರಳಿಸಿ ಅತ್ತ ನೋಡದೆ ಮುಂದೆ ಸಾಗಿದ್ದೂ ಅವಳ ಅನುಭವದಲ್ಲಿದೆ. ಸಾವಿಗೂ ಸೆಡ್ಡು ಹೊಡೆದು ಮುನ್ನುಗ್ಗುವ ಛಾತಿಯನ್ನು ಅಲ್ಲಿಯೂ ಗಂಗವ್ವ ಮೆರೆದಿದ್ದಳು.

ಕಿಟ್ಟಿಯ ಅಸ್ತಿತ್ವ ಅರ್ಥವಾಗುವುದೇ ಗಂಗವ್ವನ ಕರುಳ ಕುಡಿಯ ಮೇಲಿನ ಅವಳ ಅಪರಿಮಿತ ವಾತ್ಸಲ್ಯ, ವ್ಯಾಮೋಹದ ರೂಪದಲ್ಲಿ. ಗಂಗವ್ವನನ್ನು ಹೊರತು ಪಡಿಸಿ ಕಿಟ್ಟಿಯ ವ್ಯಕ್ತಿತ್ವವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಗಂಗವ್ವ ಅವನ ಪಾಲಿನ 'ಧೈರ್ಯದ ವೀರಗಲ್ಲು'. ತಾಯಿ ಅಶಿಕ್ಷಿತಳಾದರೂ ಕಛೇರಿಯ ಎಲ್ಲಾ ಸಂಗತಿಯನ್ನು ಹೇಳಿಕೊಂಡು ನಿಟ್ಟುಸಿರು ಬಿಡುವುದರಲ್ಲಿ ಅವನಿಗೊಂದು ನೆಮ್ಮದಿಯಿದೆ. ತಾಯಿಗೆ ಗೊತ್ತಿಲ್ಲದ ಸಂಗತಿಗಳು ತನಗೆ ಗೊತ್ತಿದೆ ಎನ್ನುವುದರ ಬಗ್ಗೆ ಒಳಗೊಳಗೆ ಹೆಮ್ಮೆ ಇದೆ. ಆದರೂ ಗಂಗವ್ವನ ದೃಷ್ಟಿಯಲ್ಲಿ ಕಿಟ್ಟಿ ಇನ್ನೂ ಏನೂ ಅರಿಯದ ಹುಡುಗ. ಪ್ರಪಂಚ ಜ್ಞಾನ ಗೊತ್ತಿಲ್ಲದವನು. ಮೋಸ, ವಂಚನೆಯ ಈ ದುಷ್ಟ ಜಾಲಕ್ಕೆ ಕಿಟ್ಟಿ ಎಲ್ಲಿ ಸಿಲುಕಿ ನೋಯುವನೋ ಎಂಬುದು ಅವಳ ಆತಂಕ. ತನ್ನ ಒಡ ಹುಟ್ಟಿದ ಸೋದರ ರಾಘಪ್ಪನಿಂದ ಅವಳು ತಿಂದ ಪೆಟ್ಟು ಜೀವನವಿಡೀ ನೆನಪಿಟ್ಟುಕೊಳ್ಳುವಂತದ್ದು. ಒಂದು ಕಾದಲ್ಲಿ ಅತ್ಯಂತ ಸಿರಿವಂತಿಕೆಯಿಂದ ಮೆರೆದ ಗಂಗವ್ವನ ಸಂಸಾರ ಈ ರಾಘಪ್ಪನ ಕಡೆಯಿಂದ ಬಡತನದ ದಾರಿ ಹಿಡಿಯಿತು. ಇದ್ದ ಹೊಲ, ಮನಿ ಮಾರ ಬೇಕಾದ ದುಸ್ಥಿಯನ್ನು ತಂದ ರಾಘಪ್ಪನ ಮೇಲೆ ಗಂಗವ್ವನ ಆಕ್ರೋಶ ಒಳಗೊಳಗೇ ಕುದಿಯುತ್ತಿತ್ತು. ಹತ್ತು ವರ್ಷಗಳ ನಂತರ ಮೊದಲ ಬಾರಿ ಗಂಗಕ್ಕನ ಮನೆಯನ್ನು ಪ್ರವೇಶಿಸಿದ ರಾಘಪ್ಪನನ್ನು ನೋಡಿ ಒಮ್ಮಲೆ ದಿಗಿಲಿಗೆ ಒಳಗಾದಳು. ಅನಿರೀಕ್ಷಿತ ಅಭ್ಯಾಗತನಾಗಿ ಬಂದ ರಾಘಪ್ಪನ ಸುಖ ಕಷ್ಟದ ನೆನಪುಗಳನ್ನು, ಕಥೆಯನ್ನು ಗಂಗವ್ವ ಕೇಳಿದ್ದೂ ಕೂಡ ಪ್ರತಿಕ್ರಿಯಾ ರಹಿತವಾಗಿಯೇ. ಒಂದೊಂದು ಬಾರಿ ಅವಳ ಕೊಂಕಿನ ನುಡಿ ರಾಘಪ್ಪನಿಗೆ ಅರ್ಥವಾದರೂ ಅದನ್ನು ಗಮನಿಸಿಯೂ ಗಮನಿಸದಂತೆ ಕಿಟ್ಟಿಯೊಂದಿಗೆ ತನ್ನ ಮಗಳ ಮದುವೆ ಸಂಬಂಧದ ವಿಷಯ ಮಾತನಾಡಿದ್ದ. ಕಿಟ್ಟಿಯ ದೃಷ್ಟಿಯಲ್ಲಿ ರಾಘಪ್ಪ ಎಲ್ಲಿ ಸಜ್ಜನ ವ್ಯಕ್ತಿಯಾಗಿ ಕಂಡು ಬಿಡುತ್ತಾನೋ ಎಂಬ ಆತಂಕ ಅವಳನ್ನು ಕಾಡುತ್ತಲೇ ಇತ್ತು. ನಡು ನಡುವೆ ಅವಳಾಡುವ ಕೊಂಕು ಮಾತಿನ ಅರ್ಥ ಅವನಿಗೆ ತಿಳಿಯದೇ ಹೊದರೂ ಕಿಟ್ಟಿಗೆ ತನ್ನ ತಾಯಿಯೊಳಗಡೆ ಎಂತಹ ಕ್ರೌರ್ಯವಿದೆ ಎನ್ನಿಸುತ್ತದೆ. ತನ್ನ ಕಛೇರಿಯ ಮೇಲಾಧಿಕಾರಿಯ ಆಪ್ತನಾದ ರಾಘಪ್ಪನಿಗೆ ಒಂದು ಕಫ್ ಚಹಾ ಮಾಡಿಕೊಡಲಾಗದಷ್ಟು ದಾಷ್ಟ್ಯವನ್ನು ತೋರಿದಳಲ್ಲ ಎಂದು ಸಿಟ್ಟೂ ಬಂದಿತು. ಮನೆಯಲ್ಲಿ ಚಹಾ ಪುಡಿ ಇಲ್ಲದ ವಿಷಯ ತಾಯಿಯಿಂದ ತಿಳಿದ ಮೇಲೆ ತನ್ನ ಮನಸಾಕ್ಷಿಗೆ ತಾನೇ ನಾಚಿಕೊಳ್ಳುವಂತಾಯಿತು. ತನ್ನ ಮರ್ಯಾದೆಯನ್ನು, ಮನೆತನದ ಅಭಿಮಾನವನ್ನೂ ಒಟ್ಟಾಗಿ ಕಾಯ್ದ ತಾಯಿ ಶಕ್ತಿಯ ಅರಿವಾಯಿತು ಕಿಟ್ಟಿಗೆ.

ಈ ಸನ್ನಿವೇಶದಲ್ಲಿ ಗಂಗಮ್ಮನ ಮನೋಸ್ಥಿತಿಯನ್ನು ಸೂಕ್ಷ್ಮವಾಗಿ ಕಾದಂಬರಿಕಾರರು ಗುರುತಿಸುತ್ತಾರೆ. ಆಕೆಯ ಮಾತಿನ ಮೊನೆ ರಾಘಪ್ಪನನ್ನು ತಿವಿಯುತ್ತಲೇ ಇತ್ತು. ಅವನಿಗೆ ಅದರ ಪರಿಚಯ ಚೆನ್ನಾಗಿಯೇ ಇತ್ತು. ಬಿರುಕು ಬಿಟ್ಟ ಸಂಬಂಧಗಳನ್ನು ಜೋಡಿಸುವ ರಾಘಪ್ಪನ ಹೊಸ ಹುನ್ನಾರಕ್ಕೆ ಗಂಗವ್ವನ ಮಾತು ಮಾತಿನಲ್ಲಿ ಮೊನಚಾದ ಉತ್ತರವಿದೆ. ಕಿಟ್ಟಿಗೆ ತನ್ನ ಬಡತನದ, ಕಷ್ಟ ಪರಂಪರೆಗೆ ಕಾರಣನಾದವನೇ ಈ ಸೋದರ ಮಾವ ಎಂಬ ಅರಿವು ಮಾಡಿಕೊಡುವಲ್ಲಿ ಗಂಗವ್ವನ ಮನಸ್ಸಿನ ತುಮುಲಗಳನ್ನು ಲೇಖಕರು ಹಿಡಿದಿಡುವ ರೀತಿ ಅನನ್ಯವಾದುದು. ನನ್ನೊಳಗೆ ಹುದುಗಿಟ್ಟುಕೊಂಡ ಎಲ್ಲಾ ಮಾತುಗಳನ್ನು ಗಂಗವ್ವ ಮಗನಲ್ಲಿ ಹೇಳಿಕೊಳ್ಳಲಾರಳು. ಹಾಗೆ ಹೇಳಿಕೊಂಡರೆ ಕಿಟ್ಟಿಯ ದೃಷ್ಟಿಯಲ್ಲಿ ಅವಳು ಹಳೆಯ ಪೀಳಿಗೆಯವಳೆಂಬ ದಿವ್ಯ ನಿರ್ಲಕ್ಷ್ಯ ದೇಸಾಯಿಯವರಂತಹ ಆತ್ಮಬಂಧು ಗಂಗವ್ವನಲ್ಲಿ ಹುಟ್ಟಿಸಿದ ಜೀವಚೈತನ್ಯ ಬಹಳ ದೊಡ್ಡದು. ಗಂಗವ್ವನ ಮನಸ್ಸಿನ ತುಮುಲಗಳೆಲ್ಲ ಗೊತ್ತಾಗುವುದು ದೇಸಾಯಿಯವರಿಗೆ ಮಾತ್ರ. ರಾಘಪ್ಪನ್ ವಿಚಾರವನ್ನು ಅವರಲ್ಲಿ ಹೇಳಿ ಮನಸ್ಸಿನ ತಲ್ಲಣಗಳನ್ನು ಹೊರಗೆಳೆದುಕೊಳ್ಳುವ ಗಂಗವ್ವನಿಗೆ ಅವನ ಸಾಚಾತನವನ್ನು ಕಿಟ್ಟಿಗೆ ಅರಿವು ಮಾಡಿಸುವುದು ಹೇಗೆ ಎಂಬ ಪ್ರಶ್ನೆ ಕಾಡುತ್ತದೆ. ಕಿಟ್ಟಿ ಒಮ್ಮೊಮ್ಮೆ ತಾಯಿಯ ಮಾತನ್ನೂ ಮೀರಿ ನಡೆಯುವುದು, ಹೆಚ್ಚು ಹಣ ಖರ್ಚು ಮಾಡುವುದು ಗಂಗವ್ವನಲ್ಲಿ ಅಸಹನೆಯನ್ನು ಹುಟ್ಟಿಸಿತ್ತದೆ. ಹತ್ತು ವರ್ಷಗಳಿಂದ ಸಾಕಿ ಸಲಹಿದ ಗಿಡದಿಂದ

ಇನ್ನೇನು ಫಲ ಬರುತ್ತದೆ ಎಂದುಕೊಳ್ಳುವಾಗ ರಾಘಪ್ಪ ಬಂದು ಕದ್ದೊಯ್ಯುವುದು ಅವಳಿಗೆ ತಡೆಯಲಾರದ ವಿಷಯ. ತಾನು ಯಾವ ಕಾರಣದಿಂದ ಕಿಟ್ಟಿಯನ್ನು ರಾಘಪ್ಪ ಮೋಸಗೊಳಿಸಲಾರದಂತೆ ತಡೆಯುವಲ್ಲಿ ನಿರಂತರ ಶ್ರಮಿಸುತ್ತಿದ್ದೇನೋ ಅದೇ ನಿಷ್ಫಲವಾಗುತ್ತಿರುವುದನ್ನು ಕಂಡು ಆಕ್ರೋಶಕ್ಕೆ ಒಳಗಾಗುತ್ತಾಳೆ. ಗಾಯನ ಗೋಷ್ಠಿಯ ನೆಪವೊಡ್ಡಿ ಮೇಲಾಧಿಕಾರಿಯ ಒಲವುಗಿಟ್ಟಿಸಲು ಕಿಟ್ಟಿಯನ್ನು ತನ್ನ ಮನೆಗೆ ಕರೆಸಿಕೊಳ್ಳುವ ರಾಘಪ್ಪನ ರಾಜಕೀಯ ಗಂಗವ್ವನಿಗೆ ತಿಳಿಯುತ್ತಿದ್ದರೂ ಅವಳು ಅಸಹಾಯಕಳಾಗಿ ಬಿಡುತ್ತಾಳೆ. ಆದರೂ ಸೋಲೊಪ್ಪಿಕೊಳ್ಳದ ತಾಯ್ತನದ ಆತ್ಮಗೌರವವನ್ನು ಕಾಯ್ದುಕೊಳ್ಳಲು ನಿರಂತರ ಶ್ರಮಿಸುತ್ತಲೇ ಇರುತ್ತಾಳೆ.

ಗಂಗವ್ವನ ತಾಯ್ತನದ ಪ್ರಜ್ಞೆಗೆ ಪ್ರಖರ ರಾಜಕೀಯ ಆಯಾಮವಿದೆ. ಹೆಣ್ಣು- ಹೆಣ್ತನದ ಪ್ರಶ್ನೆಗಳು ಮುಖಾಮುಖಿಯಾಗುವ ಭಿನ್ನ ಸಾಧ್ಯತೆಯನ್ನು ಪುಣೇಕರ ನಮ್ಮ ಮುಂದಿಡುತ್ತಾರೆ. ರಾಘಪ್ಪನಂತಹ ಅಪ್ರತಿಮ ಚಾಣಾಕ್ಷ, ವಂಚಕನ್ನು ಅವಳು ಎದುರಿಸುವುದು ಮತ್ತು ಕಿಟ್ಟಿಯು ತೋರುವ ಎಲ್ಲಾ ಅಪ್ರಬುದ್ಧತೆಯ ಸಂಗತಿಗಳನ್ನು ಸಹಿಸುವುದು ಈ ಎರಡೂ ಸಂಗತಿಗಳು ಅವಳಿಗೆ ಗೊತ್ತಿದೆ. ತನ್ನ ತಾಯಿಯ ಆಕ್ರೋಶ, ಪ್ರೀತಿ ತನಗೊಂದು ಬಂಧನವೆಂದೇ ಭಾವಿಸಿವ ಕಿಟ್ಟಿಯಲ್ಲಿ ರಾಜಕೀಯವನ್ನು ತಿಳಿದುಕೊಳ್ಳುವ ಸೂಕ್ಷ್ಮತೆ ಇಲ್ಲ. ಕಷ್ಟ ಕಾಲದಲ್ಲಿ ಮಗನಿಗಾಗಿ ತುಸು ಹಣವನ್ನು ದೇಸಾಯಿವರಲ್ಲಿ ಬಚ್ಚಿಡುವ ಅವಳ ಮನೋವೃತ್ತಿಯಲ್ಲಿ ಅಪಾರವಾದ ಜೀವನ ಪ್ರೇಮ ಗೋಚರಿಸುತ್ತದೆ. ತಾಯಿ ಅಡಗಿಸಿ ಇಟ್ಟ ಒಂದು ಸಾವಿರ ರೂಪಾಯಿ ವಿಚಾರ ಕಿಟ್ಟಿಗೆ ತಿಳಿದಾಗಲೂ ಕಿಟ್ಟಿಯಲ್ಲಿ ಇಲ್ಲವೆಂದೇ ವಾದಿಸುತ್ತಾಳೆ ಮತ್ತು ದೇಸಾಯಿಯವರಿಗೆ ಸಾವಿರ ರೂಪಾಯಿ ವಿಚಾರ ಮಗನಿಗೆ ಹೇಳಬಾರದು ಎಂದು ತಾಕಿತು ಹಾಕುತ್ತಾಳೆ.

ಕಿಟ್ಟಿಯನ್ನು ನಿಧಾನವಾಗಿ ಸಂಬಂಧದ ಎಳೆ ಬೀಸಿ ತನ್ನ ಮಗಳನ್ನು ಮೆಚ್ಚುವ ಹಾಗೆ ಮಾಡಿದ ರಾಘಪ್ಪನಿಗೆ ತಾನು ಗೆದ್ದೆನೆಂಬ ಅಹಂಕಾರವಾದರೆ, ಗಂಗವ್ವನಿಗೆ ತನ್ನ ಮಗನನ್ನು ತಾನು ನಿಯಂತ್ರಿಸಬಲ್ಲೆ ಎಂಬ ಇನ್ನೊಂದು ಬಗೆಯ ಅಹಂ. ತಾನಿಲ್ಲದೆ ಕಿಟ್ಟಿ ಬದುಕಲಾರನೆಂಬ ಪ್ರಬಲ ಭ್ರಮೆಗೆ ಒಳಗಾಗುವ ಅವಳಿಗೆ ಮಗನ ಎಲ್ಲಾ ತಪ್ಪುಗಳನ್ನು ಹೊಟ್ಟೆಗೆ ಹಾಕಿಕೊಳ್ಳುವ ಗುಣವಿದೆ. ರಾಘಪ್ಪ ಹಾಗೂ ಗಂಗವ್ವರ ಅಹಂಕಾರಗಳಲ್ಲಿ ಗಂಗವ್ವನ ಅಹಂಕಾರ ತುಸು ತುಸು ಕರಗುತ್ತಲೇ ಹೋಗುವುದು ಕಾದಂಬರಿಯ ವಿಶಿಷ್ಟ ತಂತ್ರ. ರಾಘಪ್ಪ ತನ್ನ ಅಹಂಕಾರದಲ್ಲಿ ಮುಳುಗಿ ನಾಶ ಹೊಂದುವುದೂ ಗಂಗವ್ವ ಮತ್ತೆ ಮತ್ತೆ ಪುಟಿದು ನಿಲ್ಲುವುದು ಕಾದಂಬರಿಯ ಒಳಗೆ ನಡೆಯುವ ಎರಡು ಮುಖ್ಯ ಚಲನೆ. ಹಬ್ಬದ ಅಡಿಗೆ ಊಟ ಮಾಡಿಸಿ ಕಿಟ್ಟಿಯನ್ನು ಕಳುಹಿಸುವಾಗ ರಾಘಪ್ಪ 'ಇವತ್ತು ನನ್ನ ಪೆಟ್ಟು ಗಂಗಿಗೆ ಹೋಗಿ ಮುಟ್ಟತದ' ಎನ್ನುತ್ತಾನೆ. ಊಟಕ್ಕಾಗಿ ಕಾದು ಸೋತ ಗಂಗವ್ವ ಕಿಟ್ಟಿ ರಾಘಪ್ಪನ ಮನೆಯಲ್ಲಿ ಊಟ ಮಾಡಿದ ಸಂಗತಿಯನ್ನು ಸರಿಯಾಗಿಯೇ ಊಹಿಸುತ್ತಾಳೆ. ಸತ್ಯವನ್ನು ಒಪ್ಪಿಕೊಳ್ಳುವ ಕಿಟ್ಟಿಯ ಮಾತಿನಲ್ಲಿ ಕಾಣಿಸುವ ಬಿರುಸು ಅವಳಲ್ಲಿ ಹುಟ್ಟಿಸಿದ ಆತಂಕ, ನೋವು 'ಹೆಣ್ಣು ಜನ್ಮದ ಗೋಳಿನ' ಕತೆಯಾಗಿ ತೋರುತ್ತದೆ.

ಅಲ್ಲಿಯೂ ಗಂಗವ್ವ ಸೋಲುವುದಿಲ್ಲ. ರಾಘಪ್ಪನ ತಂತ್ರಕ್ಕೆ ಪ್ರತಿ ತಂತ್ರ ಹುಡುವುದಕ್ಕೆ ದೇಸಾಯಿ ನೆರವು ಪಡೆದು ಕಿಟ್ಟಿಗೆ ಇನ್ನೊಂದು ಕನ್ಯೆಯನ್ನು ನೋಡುವ ಶಾಸ್ತ್ರ ಶುರು ಮಾಡುತ್ತಾಳೆ. ರಾಘಪ್ಪನ ಮಗಳು ರತ್ನಾಳಲ್ಲಿ ಅನುರಕ್ತನಾದ ಕಿಟ್ಟಿ ಮಾವನೊಂದಿಗೆ ಸೇರಿ ಮದುವೆಗೆ ತಾಯಿಯನ್ನು ಒಪ್ಪಿಸಲು ದೇಸಾಯಿಯವರ ನೆರವು ಕೇಳುವ ಉಪಾಯ ನೀಡುತ್ತಾನೆ. ದೇಸಾಯಿಯನ್ನು ಒಪ್ಪಸುವಲ್ಲಿ ರಾಘಪ್ಪ ಹೂಡುವ ವಾದದಲ್ಲಿ ಅವನ ಚಾಕಚಕ್ಯತೆಯ ಅರಿವಾಗುತ್ತದೆ. ಗಂಗಕ್ಕನನ್ನು ಒಪ್ಪಿಸುವ ಕೆಲಸವನ್ನು ದೇಸಾಯಿವರಿಗೆ ವಹಿಸುವ ರಾಘಪ್ಪನ ತಂತ್ರ ಮತ್ತೆ ಮತ್ತೆ ಇದೊಂದು ಪ್ರಮುಖ ರಾಜಕೀಯ ಕಾದಂಬರಿ ಎನ್ನುವುದನ್ನು ಸ್ಪಷ್ಟ ಪಡಿಸುತ್ತದೆ. ಕೌಟಂಬಿಕ ಪರ್ಯಾವರಣದೊಳಗೆ ನಡೆಯುವ ಈ ಒಳಜಗಳ ಮನುಷ್ಯ ಸ್ವಭಾವಗಳ ಯಥಾ ಚಿತ್ರಣವನ್ನು ನಮ್ಮ ಮುಂದಿಡುತ್ತದೆ. ರಾಘಪ್ಪನ ಮೇಲೆ ಇಷ್ಟು ದ್ವೇಷ ಇರುವ ಗಂಗಕ್ಕ ದೇಸಾಯಿಯವರ ಮಾತಿಗೆ ಬೆಲೆ ಕೊಟ್ಟು ಮದುವೆಗೆ ಯಾಕೆ ಒಪ್ಪುತ್ತಾಳೆ? ಗಂಡು ಮಕ್ಕಳಿಲ್ಲದ ರಾಘಪ್ಪನ ತವರು ಮನೆಯ ಆಸ್ತಿಗೆ ಮುಂದೆ ಕಿಟ್ಟಿಯೇ ವಾರಸುದಾರನಾಗುತ್ತಾನೆ ಎಂಬ ಸಣ್ಣ ಸ್ವಾರ್ಥ ಒಂದು ಕಡೆಯಾದರೆ ತಾನು ಮದುವೆಗೆ ಒಪ್ಪದೇ ಇದ್ದರೆ ಎಲ್ಲಿ ಮಗನು ತನ್ನ ಅಂಕೆಯಿಂದ ಕೈತಪ್ಪಿ ರಾಘಪ್ಪನ ವಶವರ್ತಿಯಾಗುತ್ತಾನೋ ಎಂಬ ಭಯ ಅವಳನ್ನು ಕಾಡುತ್ತದೆ. ಜೊತೆಗೆ ಗಂಡು ಮಕ್ಕಳಿಲ್ಲದ ರಾಘಪ್ಪನಿಗೆ ತನ್ನ ಮಗ ದತ್ತಕ ಪುತ್ರನಾಗುವ ವಿಚಾರವು ಅವಳ ಎದೆಯೊಳಗೊಂದು ಸಣ್ಣ ಸಂತೋಷ ಮೂಡಿಸುತ್ತದೆ. ಕಿಟ್ಟಿಯನ್ನು ತನ್ನತ್ತ ಉಳಿಸಿಕೊಳ್ಳುವ ಒಂದು ದಾರಿಯಾಗಿಯೂ

ಗಂಗಕ್ಕ ಮದುವೆಗೆ ಒಪ್ಪುತ್ತಾಳೆ. ದೇಸಾಯಿ ಗೋಪಣ್ಣನ ಮೇಲೆ ಇಟ್ಟ ಅಪರಿಮಿತ ಗೌರವವನ್ನೂ ಕಾಯ್ದುಕೊಂಡ ಸಾರ್ಥಕತೆಯನ್ನೂ ಒಟ್ಟಿಗೆ ಅನುಭವಿಸುತ್ತಾಳೆ.

ಮದುವೆ ದಿನ ಗಂಗಕ್ಕನನ್ನು ಮಣಿಸುವ ಹೊಸ ತಂತ್ರವಾಗಿ ವರದಕ್ಷಿಣೆ ವಿಚಾರದಲ್ಲಿ ರಾಘಪ್ಪ ಮಾಡುವ ನಾಟಕವನ್ನು ಮೊದಲೇ ಊಹಿಸಿದ ಗಂಗಕ್ಕ ದೇಸಾಯಿಯರೊಂದಿಗೆ, "...ದತ್ತಕ ಮಾಡಿಕೋತಾರ ಅನ್ನೋ ಆಶಾಕ್ಕ ಗಂಗಕ್ಕ ಎಲ್ಲಾದಕ್ಕೂ ಬಗ್ಗಿದಳು ಅಂತ ಅವ ಜಂಭಾ ಕೊಚಿಕೋತ ಅಡ್ಡ್ಯಾನತಾನ. ಅಪಮಾನ ನಾ ಸಹನ ಮಾಡಿಕೊಳ್ಳಲಿಕ್ಕೆ ಒಲ್ಲೆ. ನಾನಂತೂ, ಏನಾದರೂ ಹೆಚ್ಚು ಕಡಿಮೆ ಬರಲಿ, 'ಕಿಟ್ಟ್ಯಾ, ನೀ ನನ್ನ ಮಗ ಖರೆ ಹೌದಾದರ ಮಂಟಪಾ ಬಿಟ್ಟು ಹೊರಗ ನಡಿ'. ಅಂತೇನಿ. ಇಷ್ಟೂ ಮೀರಿ ಆತ ಬರದಿದ್ದರೆ ನಾನಂತೂ ಹೊರಟು ಬರುವಾಕಿ. ಆಗಲಿ ಲಗ್ನ ನನ್ನ ಪರೋಕ್ಷದಾಗ"ಎನ್ನುತ್ತಾಳೆ. ಇಲ್ಲಿ ಗಂಗಕ್ಕನಿಗೆ ವರದಕ್ಷಿಣೆಯ ಐದುನೂರು ರೂಪಾಯಿಗಿಂತಲೂ ರಾಘಪ್ಪ ಗಂಗವ್ವಳನ್ನು ಮಣಿಸಿದ ಅಂತ ಅವನು ತಿಳದುಕೊಳ್ಳಬಾರದು ಎನ್ನುವ ಮುಂಜಾಗ್ರತೆ. ತನ್ನ ಹಟಕ್ಕಾಗಿ ಮದುವೆಯನ್ನೂ ನಿಲ್ಲಿಸಲು ಹಿಂದು ಮುಂದು ನೋಡದ ತಿರಸ್ಕಾರ ಅವಳೊಳಗೆ ಆಗಲೇ ರೂಪುಗೊಂಡಿತ್ತು. ಗಂಗವ್ವ ಕೆಲವೊಮ್ಮೆ ಹೆಣ್ತನದ ಸಾಂಪ್ರದಾಯಿಕ ನಿಲುವುಗಳನ್ನು ಮೀರಿ ವ್ಯವಹಾರಿಕ ಜಗತ್ತಿನ ಪ್ರತಿನಿಧಿಯಾಗಿ ಕಾಣಿಸುವುದು ಅವಳೊಳಗಿನ ಪ್ರತಿರೋಧದ ಕಾರಣದಿಂದಾಗಿಯೇ ಎಂಬುದು ಬಹಳ ಮುಖ್ಯ.

ಅತ್ತೆ– ಸೊಸೆಯ ನಡುವೆ ಉಂಟಾಗುವ ವೈಮನಸ್ಸುಗಳ ಚಿತ್ರಣಕ್ಕೆ ಕಾದಂಬರಿಯಲ್ಲಿ ಸಾಕಷ್ಟು ಅವಕಾಶಗಳನ್ನು ಕಲ್ಪಿಸಲಾಗಿದೆ. ಅತ್ತೆಯ ಬಗ್ಗೆ ಹಲವು ಬಗೆಯ ಪೂರ್ವಾಗ್ರಹಗಳನ್ನು ಹೊಂದಿರುವ ರತ್ನ ಗಂಗವ್ವ ಸಹಿಸದ ಮಾತುಗಳನ್ನೂ ಆಡಿದ್ದಾಳೆ. ಗಂಗಕ್ಕನೂ ಅದಕ್ಕೆ ಪ್ರತಿ ಮಾತು ನೀಡಿದ್ದಾಳೆ. 'ಏನೇ ಆದರೂ ಕಿಟ್ಟಿಯ ಕೈ ಬಿಡಬಾರದು...' ಎನ್ನುವ ಅವಳ ಕಠೋರ ನಿರ್ಧಾರದಲ್ಲಿ ಮಗನಿಗಾಗಿ ಎಂತಹ ಕಷ್ಟವನ್ನೂ ಸಹಿಸಿಯೇನು ಎಂಬ ಛಲವಿದೆ; ಆತ್ಮ ನಿರ್ವೇಶವಿದೆ. ರಾಘಪ್ಪನ ಆಟ ನಡೆಯದಂತೆ ದುರ್ಬಲ ಮಗನ ಹಿತ ಕಾಯುವ ಮಹಾ ಮಾಯಿಯಾಗಿ, ಗಂಗಾಮಾಯಿಯಾಗಿ ದಿನದಿಂದ ದಿನಕ್ಕೆ ಗಂಗವ್ವ ರೂಪುಗೊಳ್ಳುತ್ತಾ ಹೋಗುತ್ತಾಳೆ.

ಕಾದಂಬರಿಯ ಎರಡನೇ ಭಾಗದ ಚಲನೆ ಹೆಚ್ಚು ಧಾರ್ಮಿಕವಾದುದು. ಕರ್ಮ ಸಿದ್ಧಾಂತದ ಪ್ರತಿಪಾದನೆಯಲ್ಲಿ ಎಲ್ಲವೂ ಸಮಾಪ್ತಿಯಾದಂತೆ ಕಾಣುತ್ತದೆ. ದ್ವೇಷಕ್ಕೆ ದ್ವೇಷ, ಸೇಡಿಗೆ ಸೇಡು ಎಂಬ ಅರ್ಥದಲ್ಲಿಯೇ ದೇಸಾಯಿ ಹಾಗೂ ಗಂಗಕ್ಕನನ್ನು ಎದುರಿಸುವ ರಾಘಪ್ಪನಿಗೆ ಬದುಕಿನ ಸತ್ಯದ ಅರಿವಾಗುವುದು ತನ್ನ ಹೆಂಡತಿ ಸತ್ತುಹೋದ ಸುದ್ದಿ ತಿಳಿದ ಮೇಲೇಯೇ. ತನ್ನನ್ನು ತಾನು ಕೊಂದುಕೊಳ್ಳುವುದರ ಮೂಲಕ ಅಂತ್ಯವಾಗುವ ಮೂರು ಮನೆತನಗಳ ಸುದೀರ್ಘ ಕಥನವನ್ನು ನೀತಿ ಹೇಳುವ ದಾರಿ ಹುಡುಕುವಲ್ಲಿ ಕಾದಂಬರಿಕಾರರ ತುಡಿತವಿದೆ. ಗಂಗಕ್ಕನಿಗೆ ಬೆಂಬಲವಾಗಿ ನಿಂತ ದೇಸಾಯಿಯವರನ್ನು ಮಣಿಸುವ ತಂತ್ರ ರೂಪಿಸುತ್ತಲೇ ಹೋಗುವ ರಾಘಪ್ಪ ಕಿಟ್ಟಿಯನ್ನು ದತ್ತಕ ತೆಗೆದುಕೊಳ್ಳುವ ತನ್ನ ಮಾತನ್ನೇ ಮುರಿದು ಇನ್ನೊಂದು ಗಂಡು ಮಗುವನ್ನು ಹಡೆಯುವಂತೆ ಹೆಂಡತಿಯನ್ನು ಸಿದ್ಧಗೊಳಿಸುವುದು, ದೇಸಾಯಿಯವರ ಮಗ ವಸಂತನನ್ನೇ ತನ್ನ ಪಕ್ಷಕ್ಕೆ ಎಳೆದುಕೊಂಡು ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡುವ ಆಲೋಚನೆ ಮಾಡುವುದು, ವಸಂತನನ್ನು ಪ್ರೇರೇಪಿಸಿ ತನ್ನ ತಂದೆಯಿಂದ ತನ್ನ ಭಾಗದ ಆಸ್ತಿಯನ್ನು ಅವನು ಕೇಳುವಂತೆ ಮಾಡುವುದು ಇವೆಲ್ಲವೂ ಅವನ ಗಂಡಭೇರುಂಡ ಮುಖದಲ್ಲಿ ಸೇರಿದೆ. ಅದಕ್ಕೆ ಪರ್ಯಾಯವಾಗಿ ದೇಸಾಯಿ ರಾಘಪ್ಪನ ತಂತ್ರಗಳನ್ನು ಬಯಲುಗೊಳಿಸುತ್ತಲೇ ಹೋಗುತ್ತಾರೆ. ಗಂಗಕ್ಕನ ತವರು ಮನೆಯ ಆಸ್ತಿಯನ್ನು ಸಹೋದರ ವೆಂಕಟಾಟಿಗೂ ಕೊಡದೇ ತಾನು ಅನುಭವಿಸುವ ರಾಘಪ್ಪನ ಅಹಂಕಾರ ಮುರಿಯಲು ತನ್ನ ಮಗ ಅಚ್ಯುತನ ಮೂಲಕ ವೆಂಕಟಿಯನ್ನು ಪತ್ತೆ ಹಚ್ಚಿ ಅವನ ಅಸ್ತಿತ್ವದ ಕುರುಹುಗಳನ್ನು ರಾಘಪ್ಪನಿಗೆ ತಿಳಿಸಲು ಅಚ್ಯುತನ ಪತ್ರಗಳನ್ನು ಅವನಿಗೆ ಕಳುಹಿಸುವುದು, ರಾಘಪ್ಪನ ಮಾತು ಕೇಳಿ ಆಸ್ತಿಪಾಲು ಕೇಳಲು ಬಂದ ವಸಂತನಿಗೆ ಸರಿಯಾದ ಬುದ್ಧಿ ಕಲಿಸುವುದು ಪರಸ್ಪರರಲ್ಲಿ ಒಳಗೊಳಗೆ ನಡೆಯುವ ಈ ಸಂಘರ್ಷ ರಾಜಕಾರಣ ಅಂತ್ಯವಾಗುವುದು ಅಪ್ರತಿಮ ಚಾಣಾಕ್ಷ ರಾಘಪ್ಪ ಭರಾರಿಯ ಸಾವಿನಿಂದ ಎನ್ನುವುದು ಕಾದಂಬರಿಯ ತಿರುವು.

ಕಾದಂಬರಿಯಲ್ಲಿ ಮಾನವೀಯ ಮುಖದ ಒಂದು ಅತ್ಯುತ್ತಮ ಚಿತ್ರಣವೆಂಬಂತೆ ಮೆಹಬೂಬಳ ಪಾತ್ರ ಕಂಡು ಬರುತ್ತದೆ. ರಾಘಪ್ಪನ ಖಾಸಗಿ ಜೀವನದಲ್ಲಿ ಮಹತ್ವದ ಸ್ಥಾನ ಪಡೆದ ಆಕೆ ಮಾಡುವ ತ್ಯಾಗ, ರಾಘಪ್ಪನ ಕುಟುಂಬದ ಜೊತೆಗೆ ಇರಿಸಿಕೊಂಡ ಸಂಬಂಧ ಹೆಣ್ಣು, ಹೆಣ್ಣಿನ ವ್ಯಕ್ತಿತ್ವದ ಬಗೆಗೆ ಲೇಖಕರಿಗಿರುವ ಗೌರವವನ್ನು ಸೂಚಿಸುತ್ತದೆ. ರಾಘಪ್ಪನ ಎರಡು ಕಣ್ಣುಗಳಂತಿರುವ ಪತ್ನಿ ಚಂಪಕ್ಕ ಹಾಗೂ ಮೆಹಬೂಬ ಅವನ ಕ್ರೌರ್ಯದ ಮುಖದೊಳಗೂ ಇಣುಕುವ ಕರುಣೆಯ ಬಿಂಬಗಳಾಗಿ ಕಾಣುತ್ತಾರೆ. ರಾಘಪ್ಪನ ಸಣ್ಣತನ, ಜಿದ್ದು ಇಬ್ಬರನ್ನೂ ಬಲಿ ತೆಗೆದುಕೊಂಡಿತು. ಅವನ ಎಲ್ಲಾ ಮೋಸದಾಟದ ಫಲವನ್ನು ಅವನು ಅನುಭವಿಸುವುದು ಮಹಾ ಕಾವ್ಯದ ಕೊನೆಯಲ್ಲಿ ಫಲಶ್ರುತಿ ಹೇಳುವ ಹಾಗೆ ಲೇಖಕರ ಧೋರಣೆ ನೀತಿಪರತೆಗೆ ಬಂದು ನಿಲ್ಲುತ್ತದೆ. ಅದು ಇಂತಹ ಪಾಪ ಕೃತ್ಯಗಳನ್ನು ಮಾಡಿದರೆ ಇಂತಿಂತಹ ಪ್ರಾಯಶ್ಚಿತ ಎಂಬ ಪಾಪಪುಣ್ಯಗಳ ಲೆಕ್ಕಾಚಾರಕ್ಕೆ ತೊಡಗಿ ಸಂಪ್ರದಾಯ ವಾದಕ್ಕೆ ಮರಳುತ್ತಾರೆ. ಗಂಗಕ್ಕನಿಗೂ, ದೇಸಾಯಿಯವರಿಗೂ ಮೋಸ ಮಾಡಲು ಬಯಸಿದ ಅವನಿಗೆ ಕೊನೆಯಲ್ಲಿ ಉಂಟಾದ ಹಾನಿ ಯಾವುದು? ಅವನ ಮಗಳ ಶೀಲವನ್ನು ವಸಂತ ಅಪಹರಿಸಿದ್ದನ್ನೂ, ಪ್ರೀತಿಪಾತ್ರಳಾದ ಮೆಹಬೂಬ, ಚಂಪಕ್ಕನನ್ನು ಕಳೆದುಕೊಂಡು ತಾನೂ ಆತ್ಮಹತ್ಯೆಯ ದಾರಿ ಹಿಡಿಯುವುದು ಕಾದಂಬರಿ ಸಿನಿಮೀಯ ಮಾದರಿಗೆ ತಿರುಗಿಕೊಂಡಂತೆ ತೋರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ರಾಘಪ್ಪ ದೇಸಾಯಿಯವರಿಗೆ ಕಳುಹಿಸಿದ ಮೃತ್ಯು ಪತ್ರದಲ್ಲಿ ಸೋಲು ಗೆಲುವಿನ, ಒಳಿತು ಕೆಡಕುಗಳ ತಪ್ಪೊಪ್ಪಿಗೆಯ ದೊಡ್ಡ ಪರಾಮರ್ಶೆ ಕಂಡು ಬರುತ್ತದೆ. 'ನನ್ನ ಕೊನೆಯ ಸೋಲು–ನನ್ನ ಹೆಂಡತಿಯ ಸಾವು!' ಎಂದು ಕೊಳ್ಳುವ ಅವನ ನಿಲುವು ಸಹ ಗೆದ್ದದ್ದು ಯಾರು? ಸೋತದ್ದು ಯಾರು? ಎಂಬ ಸರಳ ವಿನ್ಯಾಸವನ್ನು ನಮ್ಮ ಮುಂದಿಡುತ್ತದೆ. ತಂದೆ ತಾಯಿ ಇಲ್ಲದ ತಮ್ಮನ ಮಕ್ಕಳನ್ನು ತನ್ನ ಮಕ್ಕಳೆಂದೆ ಭಾವಿಸುವ ಗಂಗಕ್ಕ, ದೇಸಾಯಿಯವರ ಮಗ ವಸಂತನಿಂದ ವಂಚನೆಗೊಳಗಾದ ತನ್ನ ಮಗಳನ್ನು ಸೊಸೆಯನ್ನಾಗಿ ಸ್ವೀಕರಿಸುವಂತೆ ಕೋರಿದ ರಾಘಪ್ಪನ ಕೊನೆಯ ಆಸೆ ಇಡೇರಿಸುವ ದೇಸಾಯಿ, ಕಿಟ್ಟಿಯ ತಂದೆ ಸ್ವಾಮಿರಾಯನಿಗೆ ರಾಘಪ್ಪನಿಂದಾದ ಹಾನಿಯನ್ನು ಸರಿ ಮಾಡಲು ತೋರುವ ದಾರಿ ಇವೆಲ್ಲವೂ ಕಾದಂಬರಿಯ ನಾಟಕೀಯ ಅಂಶಗಳಾಗಿವೆ.

ಸಾವು ಮನುಷ್ಯ ಜೀವನಕ್ಕೆ ಉಂಟು ಮಾಡುವ ತಲ್ಲಣ ಅವನೊಳಗಿನ ಕ್ರೌರ್ಯಕ್ಕೂ ಒಂದು ಮಿತಿಯನ್ನು ತಂದು ಬಿಡುತ್ತದೆ ಎನ್ನುವ ನಿಲುವಿನ ಮೂಲಕ ಕಾದಂಬರಿಕಾರರು ಪುರಾಣ ಪ್ರಜ್ಞೆಗೆ ಮರಳುತ್ತಾರೆ. ನಮ್ಮ ಪುರಾಣಗಳು ಕಳಿಸಿದ ನೀತಿ ಪಾಠವನ್ನು ನೆನಪಿಸುತ್ತವೆ. ರಾಮನಿಂದ ಹತನಾದ ರಾವಣ, ಕೃಷ್ಣ ಹಾಗೂ ಪಾಂಡವರಿಂದ ನಾಶವಾದ ಕೌರವರು ನಮ್ಮ ಪುರಾಣ ಪರಿವ್ಯಾಖ್ಯೆಯಲ್ಲಿ 'ದುಷ್ಟರು', 'ರಾಕ್ಷಸರು'. ಒಳ್ಳೆಯತನವನ್ನು ವೈಭವಿಕರಿಸಿ ಅದಕ್ಕೆ ವಿರುದ್ಧವಾಗಿ ದುಷ್ಟತನವನ್ನು ಸರಿ ಮಿಗಿಲಾಗಿ ಕಟ್ಟಿ ಹೇಳುವ ಭಾರತದ ಕಥನ ಪರಂಪರೆಯ ತಂತ್ರ ಸಾಮಗ್ರಿಗಳನ್ನು ಪುಣೇಕರ್ ತುಸು ಹೆಚ್ಚಾಗಿಯೇ ಬಳಸಿದ್ದಾರೆ. ಆದರೆ ಅದು ಎಲ್ಲಿಯೂ ಕಪ್ಪು – ಬಿಳುಪಿನ ಮಾದರಿಗಳಾಗಿ ನಿಲ್ಲವುದಿಲ್ಲ. ನಮ್ಮ ಯಕ್ಷಗಾನದಲ್ಲಿ ಶೇಣಿಯವರು ದುರ್ಯೋಧನ, ರಾವಣನ ಪಾತ್ರ ಮಾಡಿದ ಹಾಗೆ. ರಾಪ್ಪನಂತಹ ಪ್ರತಿ ನಾಯಕನೊಳಗೂ ತನ್ನ ಕಾರ್ಯಕ್ಕೊಂದು ಸಮರ್ಥನೆ ಒದಗುತ್ತದೆ. ಮನುಷ್ಯ ಸ್ವಭಾವಗಳ ತೀವ್ರ ಶೋಧಕ್ಕೆ ತೊಡಗುವ ಕಾದಂಬರಿಕಾರರು ಪ್ರತಿ ಮನುಷ್ಯನೊಳಗೆ ದೌರ್ಭಲ್ಯ ಮತ್ತು ಶಕ್ತಿಗಳು ಒಟ್ಟೊಟ್ಟಿಗೆ ಕೆಲಸ ಮಾಡುತ್ತವೆ ಎಂದು ನಂಬುತ್ತಾರೆ. ಗಂಗಕ್ಕನಿಗೆ ಮಗನ ಮೇಲಿನ ಪ್ರೀತಿ ಒಂದು ಶಕ್ತಿಯೂ ಹೌದು; ಜೊತೆಗೆ ಅವಳ ವ್ಯಾಮೋಹ ಒಂದು ದೌರ್ಭಲ್ಯವೂ ಹೌದು. ಮಗ ಕಿಟ್ಟಿಗಾಗಿ ಕಾಶಿ ಯಾತ್ರೆಯಿಂದ ತಂದ ಗಂಗಾ ಜಲವನ್ನು ಹೊರಗೆ ಸುರುವಿ ಬದುಕಿನ ಚೈತನ್ಯ ಪಡೆದ ಅವಳ ಮನೋಶಕ್ತಿ ಓದುಗರನ್ನು ಬೆರಗುಗೊಳಸುತ್ತದೆ. ಕಿಟ್ಟಿಯ ಮೇಲಿನ ವ್ಯಾಮೋಹದಿಂದ ಅವಳು ಅನುಭವಿಸುವ ಮಾನಸಿಕ ಯಾತನೆಗಳು ಅವಳ ವ್ಯಕಿತ್ವದೊಳಗೆ ತುಂಬಿಕೊಂಡ ದೌರ್ಭಲ್ಯಗಳಾಗಿಯೂ ಒಮ್ಮೊಮ್ಮೆ ಕಾಣುತ್ತವೆ.

ಕಾದಂಬರಿಯಲ್ಲಿ ಎದ್ದು ಕಾಣುವ ಪರಿಶ್ರಮವೆಂದರೆ ಮೊಕಾಶಿಯವರು ಗಂಗವ್ವನ ಪಾತ್ರವನ್ನು ನಮ್ಮ ಮುಂದೆ ಕಟ್ಟಿಕೊಡುವ ಶಿಲ್ಪಕ್ಕೆ ಸಂಬಂಧಿಸಿದ್ದು. ಈಗಾಗಲೇ ಹಲವು ವಿಮರ್ಶಕರು ಗುರುತಿಸಿದ ಹಾಗೆ ಒಡಲಾಳದ 'ಸಾಕವ್ವ', ಲಂಕೇಶರ 'ಅವ್ವ' ನ ಹಾಗೆ ಗಂಗಕ್ಕನ ಹೊಯ್ದಾಟ, ಜಿದ್ದು, ಹಟ, ಜೀವನ ಪ್ರೀತಿ ಈ ಮೊದಲದ ಗುಣಗಳಾಗಿ ಅವಳನ್ನು ಕಾದಂಬರಿಕಾರರು ಓದುಗರ ಮುಂದೆ ಸಜೀವವಾಗಿ ಬಿಂಬಿಸುತ್ತಾರೆ. ನಮ್ಮ ನಡುವಿನ ಯಾವುದೋ ಗುರುತಿನ ವ್ಯಕ್ತಿಯಾಗಿ, ನಮ್ಮ ನೆನಪಿನಲ್ಲಿ ಉಳಿಯುವ ಪರಿಚಯದ ಮುಖವಾಗಿ ಗಂಗವ್ವನ ವ್ಯಕ್ತಿತ್ವವನ್ನು ಪುಣೇಕರ್ ಕಟ್ಟಿಕೊಡುತ್ತಾರೆ. ಈ ಕಾದಂಬರಿಯನ್ನು ಓದಿ 'ಮೂರು ದಿನ ನಿದ್ದೆ ಮಾಡಿಲ್ಲ' ಎಂದು ಕವಿ ಬೇಂದ್ರೆಯವರು ಹೇಳಿದ್ದು ಈ ಕಾರಣಕ್ಕಾಗಿಯೇ ಇರಬೇಕು. ಕೌಟುಂಬಿಕ ಕಥನಗಳನ್ನು ಹೇಳುವ ಪ್ರತಿಯೊಬ್ಬ ಕಥನಕಾರನೂ ಮೊಕಾಶಿಯವರನ್ನು

ಓದಲೇ ಬೇಕು. ಒಂದೊಂದು ಪಾತ್ರವನ್ನು ಸೃಷ್ಟಿಸುವಾಗಲೂ ಅವರು ತುಂಬಿಕೊಳ್ಳುವ ಆರ್ದ್ರತೆ, ಅಂತಸತ್ವ, ಭಾಷಾ ಪ್ರಯೋಗ, ಸಂಭಾಷಣಾ ಚತುರತೆಯನ್ನು ಇಷ್ಟು ಶಕ್ತವಾಗಿ ಬಳಸಿದ ಕಾದಂಬರಿಕಾರರು ಕನ್ನಡದಲ್ಲಿ ಇಲ್ಲವೆಂದೆ ಹೇಳಬಹುದು.

ಕಾದಂಬರಿಯನ್ನೊಂದು ರಾಜಕೀಯ ಪ್ರನಾಳಿಕೆಯಾಗಿ ನೋಡಬಹುದಾದಷ್ಟು ವಾಸ್ತವವನ್ನು ಲೇಖಕರು ಬಹಳ ಎಚ್ಚರಿಕೆಯಿಂದ ಸಂರಚಿಸುತ್ತಾರೆ. ಭಗವದ್ಗೀತೆ, ರಾಮಾಯಣ, ಮಹಾ ಭಾರತಗಳು ಅವರ ಮನದೊಳಗೆ ಸುಳಿದಿರುವುದಷ್ಟೇ ಅಲ್ಲ, ಸಮಕಾಲೀನ ರಾಜಕೀಯ ತಲ್ಲಣಗಳೂ ಅವರನ್ನು ಕಾಡಿವೆ. ಸ್ವಾತಂತ್ರ್ಯದ ತತ್ಕಾಲೀನ ಕರ್ನಾಟಕದಲ್ಲಿ ಜಮಿನ್ದಾರಿ ಪದ್ಧತಿಯ ದರ್ಪ-ದೌರ್ಜನ್ಯಗಳು ಇನ್ನೂ ವಿಜೃಂಭಿಸುತ್ತಿರುವಾಗಲೇ ಅವರು ಈ ಕಾದಂಬರಿ ಬರೆದರು. ಕೃಷಿಯಿಂದ ವಿಮುಖವಾಗಿ ಸರಕಾ'ರಿ ನೌಕರಿ ಹಿಡಿದು ಸಾಗುವ ವಿದ್ಯಾವಂತ ಜನರ ವಲಸೆ, ಕಾನೂನಿನ ಅರಿವು, ದೇಶಭಕ್ತಿಯ ಕಾವು, ಪುಣೆ-ಮುಂಬಯಿ ಶಹರದ ಆಕರ್ಷಣೆ ಈ ಮೊದಲಾದ ಹಲವು ಸಂಗತಿಗಳು ಅವರನ್ನು ಕಾಡಿದೆ. ಧಾರವಾಡ ಪರಿಸರದ ಅವರ ಬದುಕಿನ್ ಅನೇಕ ಅನುಭವಗಳು ಪ್ರಾದೇಶಿಕತೆಯನ್ನೂ ಒಳಗೊಂಡು ಶ್ರೀಮಂತವಾಗಿವೆ. ವಸಾಹುಶಾಹಿ ಪ್ರಜ್ಞೆಯಲ್ಲಿ ಅರಳಿದ ಪುಣೇಕರರ 'ಗಂಗವ್ವ ಗಂಗಾಮಾಯಿ' ಕನ್ನಡದ ಸರ್ವಕಾಲೀಕ ಮೌಲ್ಯ ಪಡೆಯಬಹುದಾದ ಅತ್ಯುತ್ತಮ ಕಾದಂಬರಿ ಎಂಬುದರಲ್ಲಿ ಎರಡು ಮಾತಿಲ್ಲ.

ಗ್ರಂಥಋಣ:

೧. ಡಾ.ರಾಜೇಂದ್ರ ಚೆನ್ನಿ: ಕನ್ನಡ ಸಾಹಿತ್ಯದ ಅಸಾಧ್ಯ ವ್ಯಕ್ತಿ ಶಂಕರ ಮೊಕಾಶಿ ಪುಣೇಕರ- 'ಅಸಮಗ್ರ' ()
೨. ಸಂಸ್ಕೃತಿ ಕಥನ- ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ(೨೦೦೩)
೩. ಸಾಂಸ್ಕೃತಿಕ ಅಧ್ಯಯನ- ರಹಮತ್ ತರೀಕೆರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ(೨೦೦೪)
೪. ತೋಂಡು ಮೇವು-ಕಂತೆ ೨, ಡಾ.ಕೆ.ವಿ.ನಾರಾಯಣ, ಬರಹ ಪಬ್ಲೀಷಿಂಗ್ ಹೌಸ್, ಬೆಂಗಳೂರು (೨೦೧೦)
೫. ಶಬ್ದರೇಖೆ-ಡಾ.ಕೆ.ಕೇಶವ ಶರ್ಮ, ಅಭಿನವ ಪ್ರಕಾಶನ, ಬೆಂಗಳೂರು (೧೯೯೮)